ಕಾರ್ಯ ಕೈಗೊಂಡು ಕೆರೆಗಳ ಎಲ್ಲೆಗಳನ್ನು ಗುರುತಿಸಿ ಬೌಂಡರಿ ಕಲ್ಲುಗಳನ್ನು ನೆಡಬೇಕಾಗಿರುತ್ತದೆ. ಇದಕ್ಕೆ ಸಾಕಷ್ಟು ಅನುದಾನ ಬೇಕಾಗುತ್ತದೆ.

2. ಒತ್ತುವರಿದಾರರನ್ನು ಗುರುತಿಸಿ ಒತ್ತುವರಿಯನ್ನು ತೆರವುಗೊಳಿಸಲಾಗುವುದು.

ದೊಡ್ಡ ಬಳ್ಳಾಪುರದಲ್ಲಿ ಕುಡಿಯುವ ನೀರಿನ ತೀವ್ರ ತೊಂದರೆಯ ಬಗ್ಗೆ

48 (413) : ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ನಗರದಲ್ಲಿ ಬರದ ಹಿನ್ನೆಲೆಯಲ್ಲಿ ಸುಮಾರು 80 ಸಾವಿರ ಜನರು ಕುಡಿಯುವ ನೀರಿನ ತೀವ್ರ ತೊಂದರೆ ಅನುಭವಿಸುತ್ತಿದ್ದು 3-4 ದಿನಗಳಿಗೊಮ್ಮೆ ನೀರು ನೀಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮುಂದಿನ ಬೇಸಿಗೆಯ ದಿನಗಳಲ್ಲಿ ಇನ್ನೂ ತೀವ್ರ ತೊಂದರೆ ಬರುವ ಸಾಧ್ಯತೆಗಳಿರುವುದರಿಂದ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ಪ್ರಸ್ತುತ ಸಾಲಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ಕುಡಿಯುವ ನೀರಿಗಾಗಿ ನಗರಕ್ಕೆ ಬಿಡುಗಡೆಯಾಗಿರುವ ಹಣವೆಷ್ಟು; ಇದರಲ್ಲಿ ಕೈಗೊಳ್ಳಲಾಗಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಬಂದಿದೆ.

ಆ) ದೊಡ್ಡಬಳ್ಳಾಪುರ ನಗರಕ್ಕೆ 2002-03ನೇ ಸಾಲಿನ ಅಭಾವ ಪರಿಹಾರ ಕಾಮಗಾರಿಯಡಿ ಜಿಲ್ಲಾಧಿಕಾರಿಗಳವರಿಂದ ಮಂಜೂರಾಗಿರುವ ರೂ. 5.00 ಲಕ್ಷಗಳಲ್ಲಿ ಇದುವರೆವಿಗೂ ರೂ. 3.50 ಲಕ್ಷಗಳು ಬಿಡುಗಡೆಯಾಗಿದೆ. ಈ ಮೊತ್ತದಡಿ 10 ಸಂಖ್ಯೆ ಕೊಳವೆ ಬಾವಿ ಕೊರೆದಿದ್ದು 3 ಸಂಖ್ಯೆಯ ಕೈಪಂಪ್ ಗಳನ್ನು ಅಳವಡಿಸಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಅಂತೆಯೇ ಅಭಾವ ಪರಿಹಾರ ಕಾಮಗಾರಿಯಡಿ ವಿವಿಧ ಬಡಾವಣೆಗಳಲ್ಲಿ ಕೊಳವೆ ಬಾವಿ ಕೊರೆಯುವುದು, ಪಂಪ್ ಅಳವಡಿಸುವುದು ಪೈಪ್ ಲೈನ್ ಹಾಕುವುದು ಹಾಗೂ ನೀರು ಸರಬರಾಜು ಮಾಡುವುದು ಈ ಕಾಮಗಾರಿಗಳಿಗೆ ರೂ. 19.90 ಲಕ್ಷಗಳ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪ್ರಸ್ತುತ ಸಾಲಿನಲ್ಲಿ ಹಣ ಇನ್ನೂ ಬಿಡುಗಡೆ ಆಗಬೇಕಾಗಿದೆ.

ಗುಬ್ಬಿ ತಾಲ್ಲೂಕಿನ ಕಲ್ಲೂರು ಎಂ.ವಿ. ಸ್ಟೇಷನ್‌ನಿಂದ ಕುರುಬರಹಳ್ಳಿ - ಸಂಪಿಗೆ ಭಾಗದ ಹಳ್ಳಿಗಳಿಗೆ ಎಕ್ಸ್‌ಪ್ರೆಸ್ ಲೈನ್ ಮಂಜೂರಾತಿಯ ಬಗ್ಗೆ

50 (170) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಕಲ್ಲೂರು ಎಂ.ವಿ. ಸ್ಟೇಷನ್‌ನಿಂದ ಕುರುಬರಹಳ್ಳಿ - ಸಂಪಿಗೆ ಭಾಗದ ಹಳ್ಳಿಗಳಿಗೆ ಎಕ್ಸ್‌ಪ್ರೆಸ್ ಲೈನ್ ಮಂಜೂರಾಗಿರುವುದು ನಿಜವೆ;

ಆ) ಹಾಗಿದ್ದಲ್ಲಿ ಇದುವರೆವಿಗೂ ಕೆಲಸ ಪ್ರಾರಂಭ ಮಾಡದಿರಲು ಕಾರಣವೇನು;

ಇ) ಈ ಭಾಗದ ರೈತರಿಗೆ ವೋಲ್ಟೇಜ್ ಇಲ್ಲದೆ ತೊಂದರೆಯಾಗುತ್ತಿರುವುದು ನಿಜವೇ

ಈ) ತಕ್ಷಣ ಕೆಲಸ ಪ್ರಾರಂಭ ಮಾಡಲಾಗುವುದೇ;